ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರ್ಕಾರದ ೬೦ ಭಾಗ ಕೊಟ್ಟರೆ ರೈತರಿಂದ ೪೦ ಭಾಗ ಬರ ಬೇಕಾಗುತ್ತದೆ. ರೈತರೇ ಹೆಚ್ಚು ಮುತುವರ್ಜಿಯಿಂದ ಈ ಯೋಜನೆಯನ್ನು ಪೂರ್ಣ ಮಾಡಬೇಕು. ಆದರೆ ಇಡೀ ಸಂಸ್ಥಾನದಲ್ಲಿ ಇಂತಹ ಯೋಜನೆಗಳು ಎಷ್ಟು ಇವೆ ಎಂಬ ಪೂರ್ಣ ಚಿತ್ರವನ್ನು ತರಿಸಿ ಕೊಂಡು ನೋಡಿ, ಆದಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತದೆಂಬುದನ್ನು ನೋಡಿಕೊಂಡು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಯೋಜನೆ ಮಾಡುತ್ತೇವೆಂದು ಹೇಳಿದರೆ ಹೇಗೆ ೧೯೭೭ನೇ ಇಸವಿಯಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಿ ಈಗಾಗಲೇ ೫–೬ ವರ್ಷ ಕಳೆದುಹೋಗಿದೆ. ಆದ್ದರಿಂದ ಇದರ ಬಗ್ಗೆ ಏನಾದರೂ ಒಂದು ನಿರ್ದಿಷ್ಟ ಉತ್ತರ ಕೊಟ್ಟರೆ ಒಳ್ಳೆಯದಾಗುತ್ತದೆಂದು ನಾನು ಭಾವಿಸುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಒಂದೇ ಆಗಿದ್ದರೆ ಖಂಡಿತವಾಗಿಯೂ ಮಾಡಬಹುದಾಗಿತ್ತು. ಆದರೆ ಇಡೀ ಸಂಸ್ಥಾನದಲ್ಲಿ ಇಂತಹ ಯೋಜನೆಗಳು ಎಷ್ಟು ಇವೆ ಅವುಗಳ ಎಲ್ಲ ವಿವರಗಳನ್ನು ತರಿಸಿಕೊಂಡು ಆಮೇಲೆ ಇದರ ಬಗ್ಗೆ ಆಲೋಚನೆ ಮಾಡುತ್ತೇನೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಸನ್ಮಾನ್ಯ ದೇವೇಗೌಡರಿಗೂ ಆ ಪ್ರದೇಶ ಗೊತ್ತಿರುತ್ತದೆ. ದಯಮಾಡಿ ಇದನ್ನು ಗಮನಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇದಕ್ಕಾಗಿ ೧೫ ಲಕ್ಷ ರೂಪಾಯಿಗಳ ಅಂದಾಜು ಪೆಚ್ಚು ತಯಾರಾಗಿದೆ. ರೈತರು ಈಗಾಗಲೇ ಫೈನಾನ್ಸ್ ಇನ್ಸಿಟಿಟ್ಯೂಷನ್‌ನಿಂದ ಸಾಲವನ್ನು ತೆಗೆದುಕೊಂಡು ಇದರಲ್ಲಿ ಹಣವನ್ನು ತೊಡಗಿಸಿದ್ದಾರೆ. ಅವರು ಕೊಟ್ಟಿರತಕ್ಕಂತಹ ಹಣವನ್ನು ವಾಪಸ್ಸು ಮರುಪಾವತಿ ಮಾಡಬೇಕಾಗಿದೆ. ಈ ಯೋಜನೆಯನ್ನು ಸರ್ಕಾರ ವಹಿಸಿಕೊಳ್ಳಬೇಕಾದರೆ, ಇದರ ಬಗ್ಗೆ ಸರ್ಕಾರದ ಧೋರಣೆ ಬರುತ್ತದೆ. ಸರ್ಕಾರ ತನ್ನ ಧೋರಣೆಯನ್ನು ಘೋಷಣೆ ಮಾಡಬೇಕಾಗುತ್ತದೆ. ಒಂದು ಪೇಳೆ ವಹಿಸಿಕೊಳ್ಳಬೇಕಾದರೆ ಅದರಲ್ಲಿರತಕ್ಕಂತಹ ಅಸೆಟ್ಸ್ ಮತ್ತು ಲಯಬಿಲಿಟೀಸ್‌ನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ನಿರ್ಣಯ ಮಾಡಬೇಕಾಗುತ್ತದೆ. ಇಂತಹ ಏತ ನೀರಾವರಿ ಯೋಜನೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಏನು ಮಾಡಿದ್ದಾರೋ ಅವುಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಘೋಷಣೆ ಮಾಡಬೇಕಾಗುತ್ತದೆ. ಅಸೆಟ್ಸ್ ಮತ್ತು ಲಯಬಿಲಿಟೀಸ್ ಮತ್ತು ಅವರು ಕೊಟ್ಟಂತಹ ಸಾಲ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ರೈತರಿಗೆ ಕಾಡಿನ ಕಟ್ಟಿಗೆ ಉಪಯೋಗಿಸಲು ಪರವಾನಿಗೆ ಕೊಡುವ ಬಗ್ಗೆ.

೩೯. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಮಲೆನಾಡು ಪ್ರದೇಶದ ಕಾಡಿನಲ್ಲಿ ಕಾಡು ಕಟ್ಟಿಗೆ ಕೊಳೆತು ಬೆಂಕಿಯಲ್ಲಿ ಸುಟ್ಟು ಹೋಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ರೈತರು ಈ ಕಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಪರವಾನಗಿ ಕೊಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ.

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಮಲೆನಾಡಿನ ಅರಣ್ಯ ಪ್ರದೇಶಗಳಲ್ಲಿ ಸೌದೆಯು ಕೊಳೆತು ಮತ್ತು ಬೆಂಕಿಯಲ್ಲಿ ಸುಟ್ಟು ಹೋಗಿರುವ ಯಾವ ಪ್ರಕರಣವೂ ಸರ್ಕಾರದ ಗಮನಕ್ಕೆ ಬಂದಿಲ್ಲ.

(ಆ) ತಲೆ ಹೊರೆಯಿಂದ ಉಚಿತವಾಗಿ ಒಣಗಿದ ಕಟ್ಟಿಗೆಗಳನ್ನೂ ಅರಣ್ಯದ ಹತ್ತಿರದಲ್ಲಿ ವಾಸ ಮಾಡುತ್ತಿರುವವರು ಸ್ವಂತ ಉಪಯೋಗಕ್ಕಾಗಿ ಹತ್ತಿರದ ಜಿಲ್ಲಾ ಅರಣ್ಯಗಳಿಂದ ತರಲು ಯಾವ ಅಡಚಣೆಯೂ ಇರುವುದಿಲ್ಲ.

ಶ್ರೀ ಸ್ವಾಮಿರಾವ್.—ರೈತರು ಈ ಕಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಪರವಾನಗಿಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಬಿ.ಎ. ಜೀವಿಜಯ. ಒಣಗಿದ ಕಟ್ಟಿಗೆಗಳನ್ನು ಆರ್ಯದ ಹತ್ತಿರ ವಾಸ ಮಾಡುವ ರೈತರು ಸ್ವಂತ ಉಪಯೋಗಕ್ಕೊಸ್ಕರ ತರುವುದಕ್ಕೆ ಯಾವ ರೀತಿಯ ಅಡ್ಡಿ ಆತಂಕಗಳು ಇಲ್ಲ.

ಒಬ್ಬ ಮಾನ್ಯ ಸದಸ್ಯರು —ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಮಲೆನಾಡಿನಲ್ಲಿ ೨೦೦–೩೦೦ ಗಾಡಿ ಕಟ್ಟಿಗೆಯನ್ನು ಗಾಡಿಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಇದಕ್ಕೆ ಯಾವುದೇ ರೀತಿಯ ಪರವಾನಗಿ ಇರುವುದಿಲ್ಲ. ಇದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ ? ಆದ್ದರಿಂದ ಇಂತಹವರಿಗೆ ಕಿವ್ಮಿತ್ತ್ತ ರೀತಿಯಲ್ಲಿ ಒಂದು ಗಾಡಿ ಕಟ್ಟಿಗೆಗೆ ೧೦ ರೂಪಾಯಿಯೋ ಅಥವಾ ೨೦ ರೂಪಾಯಿಯೋ ನಿಗದಿ ಮಾಡುವುದಕ್ಕೆ ಸರ್ಕಾರಕ್ಕೆ ಇರುವಂತಹ ತೊಂದರೆ ಏನು ? ಎರಡನೆಯದಾಗಿ ಒಣಗಿದ ಸೌದೆಯನ್ನು ತರುವುದಕ್ಕೆ ಅಡೆತಡೆ ಇದೆ. ಅದರ ಬಗ್ಗೆ ನಿರ್ದಿಷ್ಟವಾಗಿಯೂ ಬಂದಿರುವುದರಿಂದ ಬಹಳ ತೊಂದರೆಯಾಗಿದ್ದು ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ.

ಶ್ರಿ ಬಿ.ಎ. ಜೀವಿಜಯ.— ೯೭ನೇ ಇಸವಿಯಿಂದ ಕಾಡಿನಿಂಜಿಣಗಿದ ಸೌದೆಯನ್ನು ತರುವುದಕ್ಕೆ ಅನುಮತಿಯನ್ನು ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಪರವಾನಗಿ ಪದ್ಧತಿಯನ್ನು ರದ್ದು ಮಾಡಿದ್ದಾರೆ. ನಂತರ ೧೯೮೧ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಅಲ್ಲಿಂದ ಈಚೆಗೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಈ ಒಂದು ಪದ್ಧತಿಯನ್ನು ರದ್ದು ಮಾಡಲಾಗಿದೆ. ಕಾರಣ ಈ ರೀತಿಯ ಪರವಾನಗಿಯನ್ನು ಪಡೆದಂತಹ ರೈತರು ತನ್ಮೂಲಕ ಅಲ್ಲಿರುವಂತಹ ಅರಣ್ಯವನ್ನು ನಾಶ ಮಾಡುವುದರ ಜೊತೆಗೆ ಅರಣ್ಯೋತ್ಪನ್ನದ ಕಳ್ಳಸಾಗಾಣಿಕೆಗೆ ಸಾಧ್ಯವಾಗುವ ಉದ್ದೇಶದಿಂದ ಸರ್ಕಾರ ಆ ಪದ್ಧತಿಯನ್ನು ನಿಲ್ಲಿಸಿದೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ರೈತರು ಕಳ್ಳಸಾಗಾಣಿಕೆ ಮಾಡುತ್ತಿಲ್ಲ. ಇವತ್ತು ಕಳ್ಳಸಾಗಾಣಿಕೆ ಮಾಡುತ್ತಿರುವವರು ಶಾಸಕರು ಇದ್ದಾರೆ, ರಾಜಕಾರಣಿಗಳಿದ್ದಾರೆ. ಅವರನ್ನು ಉಪಯೋಗ ಮಾಡಿಕೊಂಡು ಶಿವಮೊಗ್ಗ ಜಿಲ್ಲೆಯಲ್ಲಿ ಕಳ್ಳಸಾಗಾಣಿಕೆ ನಡೆಯುತ್ತಿದೆ.

ಶ್ರೀ ಕೆ.ಎಚ್. ರಂಗನಾಥ್.—ಯಾರೋ ಒಬ್ಬರು ಶಾಸಕರು ಇದೆ ಹೇಳಿ. ಎಲ್ಲ ಶಾಸಕರೂ ಅಂತ ಹೇಳಿದರೆ ಹೇಗೆ ?

ಶ್ರೀ ಎನ್. ಚಿಕ್ಕೇಗೌಡ.—ಅಂತಹ ಶಾಸಕರು ಯಾರು ಎಂಬುದನ ಹೇಳಿ.

SRI MANIKRAO PATIL —Sir, this is a very serious matter. Hon'ble member is making serious allegations, This is not fair. Hon'ble Member should withdraw those words.

SRI N. CHIKKEGOWDA.—Let the Hon.Member prove the allegations Otherwise, he should withdraw those words.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಅಧ್ಯಕ್ಷರೇ, ಈಗ ಒಂದು ಸೂಕ್ಷ್ಮವಾದ ವಿಚಾರವನ್ನು ನಮ್ಮ ಸನ್ಮಾನ್ಯ ಸದಸ್ಯರಾದ ಎಡಿಯೂರಪ್ಪನವರು ಎತ್ತಿದ್ದಾರೆ. ಅದು ಹೊಸಬರಾದ್ದರಿಂದ ಅಷ್ಟಿಷ್ಟಪಟ್ಟ ಮಾತನಾಡಲಿಕ್ಕೂ ಸಾಕು. ಶಾಸಕರು ಈ ಒಂದು ಕಾರ್ಯದಲ್ಲಿ ತೊಡಗಿದ್ದಾರೆ ಎಂಬುದಾಗಿ ಹೇಳಿದರೆ ಎಲ್ಲ ಶಾಸಕರ ಮೇಲೂ ಬರುತ್ತದೆ. ಆ ಮಾತನ್ನು ಅವರು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಯಾವ ಶಾಸಕರ ಮೇಲೆ ಅವರು ಆಪಾದನೆ ಮಾಡಿದ್ದಾರೋ ಅವರಿಗೂ ಪತ್ರ ಮುಖೇನ ಬರೆದು ಕೊಡಬೇಕಾಗುತ್ತದೆ. ಸದನಕ್ಕೂ ಬರೆದುಕೊಟ್ಟು ನಂತರ ಆ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಈ ವಿಚಾರವನ್ನು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ಶಾಸಕರ ಹಕ್ಕುಭಾದ್ಯತೆಗೆ ಚ್ಯುತಿತರತಕ್ಕದ್ದಾಗಿದೆ. ಶಾಸಕರ ಹಕ್ಕುಭಾದ್ಯತೆಯ ಪ್ರಶ್ನೆ ಬಂದಾಗ ಎಲ್ಲರೂ ಎದ್ದು ನಿಲ್ಲುತ್ತಾರೆ, ಗೊಂದಲ ಮಾಡುತ್ತಾರೆ. ತಾವು ಸಾವಧಾನದಿಂದ ಮಾನ್ಯ

ಸದಸ್ಯರಿಗೆ ತಿಳಿಯವಳಿಕೆ ಹೇಳಬೇಕಾಗುತ್ತ್ತ. ಮಾನ್ಯ ಸದಸ್ಯರಲ್ಲಿ ಮಾಹಿತಿ ಇರಬಹುದು ಅವರಲ್ಲಿ ಮಾಹಿತಿ ಇಲ್ಲ ಎಂದು ನಾನು ಹೇಳುವುದಿಲ್ಲ. ಆನೆ ಮಾನ್ಯ ಸದಸ್ಯರು ಪಕ್ಷದ ಶಾಸಕರು ಎಂದು ಹೇಳಿದರೆ ಅದು ಇಲ್ಲಿ ಇರುವ ಎಲ್ಲಾ ಶಾಸಕರಿಗೂ ಅನ್ವಯವಾಗುವುದಿಲ್ಲವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ— ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರಲ್ಲಿ ಸಾಕಷ್ಟು ಪುರಾವೆಗಳು ಇರಬಹುದು. ಇಲ್ಲ ಅಂತ ನಾನು ಹೇಳುವುದಿಲ್ಲ. ಇದಕ್ಕೆ ತಕ್ಕ ಪುಮಾವಳಿಗಳು ಇವೆ. ಅದಕ್ಕೆ ನೋಟೀಸ್ ಕೊಟ್ಟು ಕೇಳ ಬಹುದು. ನಾವೂ ಕೂಡ ಸಹಕರಿಸುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ— ಹೊಸನಗರ ಮತ್ತು ಸಾಗರಕ್ಕೆ ಸಂಬಂಧಪಟ್ಟಂತೆ ಇದರಲ್ಲಿ ಯಾರ್ಯಾರ ಕೈವಾಡ ಇದೆ ಎಂಬುದನ್ನುಸರ್ಕಾರಕ್ಕೆ ನಾನು ಲಿಖಿತ ಮೂಲಕ ತಿಳಿಸಿದ್ದೇನೆ. ಇದರ ಬಗ್ಗೆ ನನ್ನಲ್ಲಿ ಸಾಕಷ್ಟು ಪುರಾವೆಗಳು, ಆಧಾರಗಳು ಇವೆ. ಈಗ ತಾವು ರೈತರ ಸಮುದಾಯದ ಮೇಲೂ ಒಂದು ಆರೋಪ ಮಾಡಿದ್ದೀರಿ. ಅನ್ನಾಟ ಏನು ಇದೆ ಅದು ಕಳ್ಳಸಾಗಾಣಿಕೆಯಾಗಿದೆ. ಇದರ ಬಗ್ಗೆ ನನಗೆ ಸಾಕಷ್ಟು ಪುರಾವೆಗಳು ಇವೆ, ಸಾಕ್ಷಿ ಆಧಾರಗಳು ಇವೆ.

ಶ್ರೀ ಕೆ. ಹೆಚ್. ರಂಗನಾಥ್. ಮಾನ್ಯ ಸದಸ್ಯರು ಮತ್ತೆ ಮತ್ತೆ ಅದನ್ನೇ ಸಮರ್ಥನೆ ಮಾಡುತ್ತಿದ್ದಾರೆ. ಯಾರಾದರೂ ೮-೧೦ ನ ಇದ್ದರೆ ಅವರ ಹೆಸರು ಬರೆದುಕೊಟ್ಟು ಪ್ರಸ್ತಾಪ ಮಾಡಲಿ. ಇಲ್ಲದೇ ಹೋದರೆ ೨೨೪ ಶಾಸಕರಿಗೆ ಈ ಆರೋಪ ಅನ್ವಯಿಸುವುದಿಲ್ಲವೇ ?

(ಗಲಭೆ)

ಶ್ರೀ ಎಚ್. ಗಂಗಾಧರನ್. ಸ್ವಾಮಿ, ಕುಂಬಳಕಾಯಿನ ಕಳ್ಳ ಎಂದರೆ ಇವರೇಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು ?

ಶ್ರೀ ಕೆ. ಹೆಚ್. ರಂಗನಾಥ— ನಾನು ಯಾವ ನಾಟವನ್ನೂ ಕಡಿದಿಲ್ಲ.

(ಗಲಭೆ)

ಶ್ರೀ ಕೆ. ಮಲ್ಲಪ್ಪ.— ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರು ನಿನ್ನೆ ಅಥವಾ ಮೊನ್ನೆಯೋ ಗಾಂಧೀಜಿಯವರನ್ನು ಕೊಂದಂತವರನ್ನು ಸೇರಿಸಿ ಸರ್ಕಾರ ರಚನೆ ಮಾಡಿಕೊಂಡಿದ್ದೀರಿ ಎಂದು ಹೇಳಿದರು.

ಶ್ರೀ ಕೆ. ಹೆಚ್. ರಂಗನಾಥ್.— I am sorry.....

ಶ್ರೀ ಕೆ. ಮಲ್ಲಪ್ಪ.—ಕುಂಬಳಕಾಯಿನ ಕಳ್ಳ ಎಂದರೆ ತಾವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ ಸ್ವಾಮಿ ?

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಶಾಸಕ ಎಂಬ ಪದವನ್ನು ಜನರಲ್ ಆಗಿ ಉಪಯೋಗಿಸಿದ್ದಾರೆ. ಅವರನ್ನು ನಾನು ಆ ಪದವನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ I order to expunge that word from the proceedings.

SRI B. S. YEDIYURAPPA.— I will withdraw the word 'ಶಾಸಕ'

ಶ್ರೀ ಕೆ. ಹೆಚ್. ರಂಗನಾಥ್ — ಹರಿಹರನ ಕ್ಷೇತ್ರದ ಶಾಸಕರು ಎಚ್. ಗಂಗಾಧರನ್‌ರವರ 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ' ಎಂದು ಹೇಳಿದ ಪದವನ್ನು ಸಮರ್ಥಿಸಿ ಪುನ: ಅದನ್ನೇ ಹೇಳುತ್ತಿದ್ದಾರೆ. ನಾನು ಎಂದೂ ನಾಟವನ್ನು ಕಡಿದಿಲ್ಲ.

MR. DEPUTY SPEAKER.— That matter is over.

(INTERRUPTIONS)

ಶ್ರೀ ಕೆ. ಹೆಚ್. ರಂಗನಾಥ್.-- ಮಾನ್ಯ ಸದಸ್ಯರು ಶಾಸಕ ಅನ್ನುವ ಪದವನ್ನು ಉಪಯೋಗಿಸ ಬಾರದು. ನಾನು ಯಾವ ನಾಟಪನ್ನೂ ಕಡಿದಿಲ್ಲ. ಯಾರು ನಾಟವನ್ನು ಕಡಿದಿದ್ದಾರೆ ಅನ್ನುವುದರ ಬಗ್ಗೆ ತಾವು ತಕ್ಕ ಪುರಾವೆಗಳನ್ನು ತರಿಸಿಕೊಂಡು ನೋಡಿ ಈವತ್ತಲ್ಲ ನಾಳೆ ಹೇಳಬೇಕೆಂದು ಮಾನ್ಯ ಉಪಾಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ. ದಯವಿಟ್ಟು ಇದರ ಬಗ್ಗೆ ತಾವು ನನಗೆ ರಕ್ಷಣೆ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.-- ಸ್ವಾಮಿ, ನನ್ನದೊಂದು ಸಲಹೆ ಏನೆಂದರೆ ಪ್ರಶ್ನೋತ್ತರ ಕಾಲದಲ್ಲಿ ಏನಾದರೂ ಸಂಶಯ ಆತಂಕ ವಗೈರೆ ಬಂದರೆ ಆಗನ್ನು ಪ್ರಶ್ನೋತ್ತರ ಕಾಲವಾದ ಮೇಲೆ ಕೇಳಲಿ. ಅಧ್ಯಕ್ಷರ ಅಪ್ಪಣೆ ಪಡೆದು ಅವರ ಗಮನವನ್ನು ಸೆಳೆಯಲಿ ಬೇಡ ಅನ್ನುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.-- ತಾವು ಮಧ್ಯೆ ಮಧ್ಯೆ ಈ ರೀತಿ ಎದ್ದು ಗೊಂದಲ ಎಬ್ಬಿಸಿದರೆ ನಾವು ಮಾತನಾಡುವುದು ಹೇಗೆ ? ನಾನು ಮಾನ್ಯ ಉಪಾಧ್ಯಕ್ಷರ ಗಮನವನ್ನು ಸೆಳೆಯುತ್ತಾ ಇರುವ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಈ ರೀತಿ ಮಾತನಾಡಬಹುದೇ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.-- ಸ್ವಾಮಿ, ಮಾತು ಮಾತಿಗೂ ನಿಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂದು ಹೇಳುತ್ತಾರಲ್ಲ ಇದು ಸರಿಯೇ ? ಕೂಬಳಕಾಯಿ ಕಳ್ಳ ಎಂದರೆ ಇವರೇಕೆ ಹೆಗಲುಮುಟ್ಟಿ ನೋಡಿಕೊಳ್ಳಬೇಕು ಸ್ವಾಮಿ ? ಇವರು ಹೀಗೆ ಮಧ್ಯೆ ಮಧ್ಯೆ ಎದ್ದು ನಿಂತುಕೊಂಡು ಮಾತನಾಡಿದರೆ ನಾವು ಇನ್ನಾವ ರೀತಿಯಲ್ಲಿ ಮಾತನಾಡಬೇಕು ಸ್ವಾಮಿ ?

ಶ್ರೀ ಎಸ್. ಆರ್. ಬೊಮ್ಮಾಯಿ.-- ಸ್ವಾಮಿ, ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ಹಕ್ಕುಚ್ಯುತಿಗೆ ಧಕ್ಕೆ ಬಾರದ ರೀತಿಯಲ್ಲಿ ನೋಡಿಕೊಳ್ಳಬೇಕು, ಬೇಡ ಎಂದು ನಾನು ಹೇಳುವುದಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.-- ಸ್ವಾಮಿ, ಮಾನ್ಯ ಸದಸ್ಯರು ಶ್ರೀಮಾನ್ ಕೆ.ಹೆಚ್. ರಂಗನಾಥ್ ರವರ ಬಗ್ಗೆ ಅಗೌರವವಾದ ರೀತಿಯಲ್ಲಿ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಿದ್ದಾರಲ್ಲಾ ಅದನ್ನು ನಾವು ಹೇಗೆ ಸಹಿಸಿಕೊಂಡು ಇರಬೇಕು ಸ್ವಾಮಿ ? ನಿನ್ನೆ ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ, ಅವರ ಮಾತಿನ ಒಂದು ಧಾಟಿ ನೋಡಿದಾಗ ವೈಯಕ್ತಿಕವಾಗಿ ಶಾಸಕರಿಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಿದರು. ಯಾರೋ ಒಬ್ಬ ಸದಸ್ಯರು ಲಕ್ಷಗಟ್ಟಲೆ ಲೂಟಿ ಹೊಡೆದರು, ಹಾಗೆ ಹೀಗೆ ಅನ್ನುವ ಮಾತನ್ನು ಹೇಳಿದರು. ಅವರು ಈ ರೀತಿ ಮಾತನಾಡಬಹುದೇ ? ಅದು ಅವರಿಗೂ ಅವಮಾನವಾಗುತ್ತದೆ, ನಮಗೂ ಅವಮಾನವಾಗುತ್ತದೆ ಹೀಗಾದರೆ ನಾವೇಕೆ ಇಲ್ಲಿಗೆ ಬರಬೇಕು ? ನಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡು ಹೋಗುವುದಕ್ಕಲ್ಲವೇ ನಾವು ಬಂದಿರತಕ್ಕಂಥಾದ್ದು ?

(ಗೊಂದಲ)

ಶ್ರೀ ಬಿ. ಎಸ್ ಯಡಿಯೂರಪ್ಪ.-- ಮೊನ್ನೆ ದಿವಸ ಮಾತನಾಡುವಾಗ ಅವರು ಬಾಪೂಜಿಯವರನ್ನು ಕೊಂದಂಥವರಿಂದ ಬೆಂಬಲ ಪಡೆದುಕೊಂಡು ಸರ್ಕಾರ ರಚಿಸಿದರು ಎಂದು ಹೇಳಿದರು. ಆ ರೀತಿ ಅ ಡಬಹುದೇ ?

(ಗೊಂದಲ)

ಉಪಾಧ್ಯಕ್ಷರು.-- ದಯವಿಟ್ಟು ಎಲ್ಲರೂ ಕೂತುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.-- ಸ್ವಾಮಿ, ಅನೇಕ ಸದಸ್ಯರು ಇಲ್ಲಿ ಹೊಸಬರಾಗಿದ್ದಾರೆ. ಅನೇಕ ಅಂಶಗಳ ಬಗ್ಗೆ ಸಾಕಷ್ಟು ಅರಿವು ಇಲ್ಲ. ಅವರು ಮಾತನಾಡುವ ಬಗ್ಗೆ, ಅವರು ಬಳಸುವ ಪದಗಳ ಬಗ್ಗೆ ಇನ್ನೂ ಸಾಕಷ್ಟು ತಿಳುವಳಿಕೆ ಕೊಡಬೇಕಾಗಿದೆ.

(ಗೊಂದಲ)

ಶ್ರೀ ಬಿ. ಬಿ. ಚಿಮ್ಮನಕಟ್ಟಿ.-- ಮಾನ್ಯ ಸದಸ್ಯರು ಹೀಗೆ ಮಾತನಾಡಬಹುದೇ ?
ಉಪಾಧ್ಯಕ್ಷರು.-- ದಯವಿಟ್ಟು ಎಲ್ಲರೂ ಕೂತುಕೊಳ್ಳಿರಿ.

(ಗೊಂದಲ)

ಶ್ರೀ ಕೆ. ಮಲ್ಲಪ್ಪ.— ಸ್ವಾಮಿ...

(ಗೊಂದಲ)

ಉಪಾಧ್ಯಕ್ಷರು.— ಎಲ್ಲರೂ ಮಧ್ಯಾಹ್ನ ಕೂತುಕೊಳ್ಳಬೇಕು. ಹೀಗಿಯೇ ಮುಂದುವರೆಸಿಕೊಂಡು ಹೋದರೆ ಬೇರೆ ಪ್ರಶ್ನೆಯನ್ನು ಗೆದುಕೊಳ್ಳುವುದಕ್ಕಾಗುವುದಿಲ್ಲ. ಉಳಿದ ಪ್ರಶ್ನೆಗೆ ತಮಗೆ ಉತ್ತರ ಬರಲಿಕ್ಕಿಲ್ಲ. ದಯವಿಟ್ಟು ಕೂತುಕೊಳ್ಳಿ. ಇಷ್ಟಕ್ಕೆ ಇದನ್ನು ಮುಕ್ತಾಯ ಮಾಡೋಣ, ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಬಿ. ಬೈರಪ್ಪಾಜಿ.— ಸ್ವಾಮಿ, ನಾವೇನೂ ಮಾತನಾಡಬಾರದೇ ?

ಉಪಾಧ್ಯಕ್ಷರು.— ಪೂರಕವಲ್ಲದ ಮುಂದಿನ ಪ್ರಶ್ನೆಗೆ ಉತ್ತರ ಬರುವುದಿಲ್ಲ.

ಶ್ರೀ ಜೆ. ಡಿ. ಸೋಮಪ್ಪ.— ಮಾನ್ಯ ಮಂತ್ರಿಗಳು ಸರಿಯಾಗಿ ಕ್ಲಿಯರ್ ಆಗಿ ಇನ್ನೂ ಅದಕ್ಕೆ ಉತ್ತರ ಕೊಟ್ಟಿಲ್ಲ. ರೈತರೆಲ್ಲಾ ತಳ್ಳರು ಎಂದರೆ ಅವರ ಸ್ಥಿತಿ ಬಹಳ ಆತಂಕವಾಗುತ್ತದೆ, ದಯವಿಟ್ಟು ಕ್ಲಿಯರ್ ಆಗಿ ಉತ್ತರ ಕೊಡಲಿ.

ಉಪಾಧ್ಯಕ್ಷರು.— ಈಗಾಗಲೇ ವಿಳಂಬವಾಗಿದೆ. ಉಳಿದ ಪ್ರಶ್ನೆ ಎಲ್ಲಾ ಲ್ಯಾಪ್ಸ್ ಆಗಿ ಬಿಡುತ್ತದೆ ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಬಸವರಾಜ್ ಪಾಟೀಲ್ ಅತ್ತರಿ.— ನಾನು ಈಗ ಸದಸ್ಯರ ನಕ್ಕಿನ ಬಗ್ಗೆ ಹೇಳುತ್ತಿದ್ದೇನೆ. ಸಭೆಯ ಮುಂದಿರುವ ಪ್ರಶ್ನೆಯ ಬಗ್ಗೆ ನಾನು ಕೇಳುತ್ತಿಲ್ಲ. ಸಭೆಯಲ್ಲಿ ಹಿಂದೆ ಕೂತಿರತಕ್ಕ ಸದಸ್ಯರು ಈ ಸದನದ ಸದಸ್ಯರು ಹೌದೋ ಅಲ್ಲವೋ ? ಪ್ರತಿಯೊಂದು ಪ್ರಶ್ನೆಗೆ ಮುಂದೆ ಕೂತಿರತಕ್ಕ ಸದಸ್ಯರು ಪ್ರಶ್ನೆಯನ್ನು ಕೇಳಿದರೆ ಅವಕಾಶ ಕೊಡುತ್ತಿರಿ, ಹಿಂದೆ ಕೂತಿರತಕ್ಕ ಸದಸ್ಯರು ಕೇಳಿದರೆ ತಾವು ಗಮನಿಸುವುದಿಲ್ಲ. ರಾಯಚೂರು ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಹಿಂದುಳಿದಿರತಕ್ಕ ಪ್ರದೇಶ. ಇದರ ಬಗ್ಗೆ ನಾನು ಉಪಪ್ರಶ್ನೆ ಕೇಳಬೇಕು ಎಂದರೆ ತಾವು ಅವಕಾಶ ಕೊಡುವುದಿಲ್ಲ. ಇದು ತಮಗೆ ನ್ಯಾಯ ಸಮ್ಮತವೇ ?

ಉಪಾಧ್ಯಕ್ಷರು.—ಈ ಸದನದ ಎಲ್ಲಾ ಸದಸ್ಯರು ಒಂದೇ,ಎಲ್ಲರಿಗೂ ಕಾಲಾವಕಾಶ ಕೊಡುತ್ತೇವೆ.

ಲೋಕೋಪಯೋಗಿ ದಿನಗೂಲಿಗಳ ಬಗ್ಗೆ ಮತ್ತು ಸ್ಥಾನಿಕ ಅಭ್ಯರ್ಥಿಗಳ ಬಗ್ಗೆ

೪೦. ಶ್ರೀ ಬಿ.ಬಿ. ಶಿವಪ್ಪನಕಟ್ಟಿ(ಬಾದಾಮಿ),—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ ?

(ಅ) ರಾಜ್ಯದ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯಲ್ಲಿ ದಿನಗೂಲಿ ಹಾಗೂ ಸ್ಥಾನಿಕ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

(ಆ) ಈ ಸಿಬ್ಬಂದಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತ ಬಂದಿದೆ ?

ಶ್ರೀ ಜೆ. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ದಿನಗೂಲಿ ಕೆಲಸಗಾರರು—೨೮೨೨
ಸ್ಥಳೀಯ (ಸ್ಥಾನಿಕ) ಅಭ್ಯರ್ಥಿಗಳು—೩೮೪
(ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೆಲಸ ಮಾಡುವವರನ್ನು ಬಿಟ್ಟು ಈ ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ).

(ಆ) ಕೆಲಸಗಾರರ ಸಂಖ್ಯೆ ಹೆಚ್ಚಾಗಿರುವುದರಿಂದ ಪ್ರತಿಯೊಬ್ಬರ ಬಗ್ಗೆ ಮಾಹಿತಿ ಒದಗಿಸಲು ಕಷ್ಟವಾಗಿದೆ. ಆದರೂ ಇವರ ಸೇವಾ ಅವಧಿ ಆರು ತಿಂಗಳಿಂದ ೨೦ ವರ್ಷಗಳವರೆಗೆ ವಿಸ್ತರಿಸಿದೆ.